ಖಂಡಿತ ಪ್ರಸ್ತಾಪಿಸುತ್ತಾಳೆ. ಆದರೆ ಈಗ ಹರಿಲಾಲ ಇದಕ್ಕೆ ಸರಿಯಾದ ಉತ್ತರವನ್ನು ಕೊಡುವ ಸ್ಥಿತಿಯಲ್ಲಿರಲಿಲ್ಲ.

'ಗಾಂಧಿ ಮೋಶಾಯ್!' ಅವನ ಜೊತೆಗಾರನೊಬ್ಬ ಮೆಲ್ಲನೆ ಅವನ ಬಳಿಗೆ ಬಂದು ಅವನ ಕಿವಿಯಲ್ಲಿ ಉಸುರಿದ, 'ನನ್ನ ಜೊತೆಗೆ ಬಾ, ಎರಡು ಗುಟುಕು ಕುಡಿದರೆ, ಕ್ಷಣ ಮಾತ್ರದಲ್ಲಿಯೇ ಹಗುರವಾಗುತ್ತೀಯ...ಇದನ್ನು ನನ್ನ ಪಾರ್ಟಿ ಎಂದು ತಿಳಿ...ನಡಿ ಹೋಗೋಣ...ನಡಿ..'

ಹರಿಲಾಲ ಒಂದು ಕ್ಷಣ ಕಕ್ಕಾಬಿಕ್ಕಿಯಾಗಿ ನಿಂತ. ಅವನ ಗಂಡಸ್ಥಳದ ನರಗಳಲ್ಲಿನ ರಕ್ತ ತೀವ್ರ ಗತಿಯಲ್ಲಿ ಹರಿದಿದ್ದರಿಂದ ಅವು ಕೆಂಪಗಾದವು. ಅವನು ತುಟಿಗಳನ್ನು ಕಚ್ಚಿಕೊಂಡ. ಕಡೆಗೆ ಆ ಬಂಗಾಳಿ ಬಾಬೂನ ಕೈಯನ್ನು ಹಿಡಿದ.

ಅಂದು ರಾತ್ರಿ ಹರಿಲಾಲ ತಡವಾಗಿ ಮನೆಗೆ ಬಂದಾಗ ಮಕ್ಕಳು ನಿದ್ರಿಸುತ್ತಿದ್ದರು. ಗುಲಾಬ ಕಳವಳದಿಂದ ಬಾಗಿಲ ಬಳಿ ನಿಂತಿದ್ದಳು. ಹರಿಲಾಲನ ಕಾಲುಗಳು ತಡಬಡಿಸುತ್ತಿದ್ದವು. ಅವನ ಬಾಯಿಂದ ಕೆಟ್ಟ ವಾಸನೆ ಬರುತ್ತಿತ್ತು. ಪತಿಯ ಈ ಆಕಸ್ಮಿಕ ಪರಿಸ್ಥಿತಿಯನ್ನು ನೋಡಿ ಗುಲಾಬ ಭಯದಿಂದ ಆಪಾದಮಸ್ತಕ ಕಂಪಿಸಿದಳು. ಅವಳಿಗೆ ಏನು ಮಾಡಬೇಕೆಂದು ಹೊಳೆಯುತ್ತಿರಲಿಲ್ಲ. ಒಂದು ಕ್ಷಣ ದೇವರ ಸ್ತುತಿಯೊಂದನ್ನು ಮನಸ್ಸಿನಲ್ಲಿ ಹೇಳಿಕೊಂಡಳು. ನಂತರ ಗಾಳಿಯಲ್ಲಿಯೇ ದೇವರಿಗೆ ಕೈ ಮುಗಿದಳು. ಕಡೆಗೆ ಅವಳು ಹರಿಲಾಲನಿಗೆ ಆಸರೆ ನೀಡಿ ಒಳಗೆ ಕರೆದೊಯ್ದು ಹಾಸಿಗೆಯಲ್ಲಿ ಮಲಗಿಸಿದಳು. ಸರಾಯಿಯ ದುರ್ಗಂಧ ಬಡಿಯುತ್ತಿತ್ತು. ಅವಳು ಮೋರಿಯ ಬಳಿಗೆ ಹೋಗಿ ತಕ್ಷಣ ವಾಂತಿ ಮಾಡಿದಳು. ಹರಿಲಾಲ ಏನೇನೋ ಬಡಬಡಿಸುತ್ತಿದ್ದ. ಮಕ್ಕಳಿಗೆ ಎಚ್ಚರವಾಗದಿರಲೆಂದು ಗುಲಾಬ ಮನಸ್ಸಿನಲ್ಲಿ ದೇವರನ್ನು ಪ್ರಾರ್ಥಿಸುತ್ತಿದ್ದಳು. ರಾತ್ರಿಯೆಲ್ಲಾ ಪತಿಯ ತಲೆಯ ಬಳಿ ಕೂತು ಎಚ್ಚರದಿಂದಿದ್ದಳು. ಅವಳ ಕಣ್ಣುಗಳಿಂದ ಕಣ್ಣೀರಧಾರೆ ಹರಿಯುತ್ತಿತ್ತು.

ಆದರೆ ಮರುದಿನ ಹರಿಲಾಲನಿಗೆ ಪ್ರಜ್ಞೆ ಬಂದಾಗ ಅವನು ಸಂಪೂರ್ಣವಾಗಿ ಸ್ವಸ್ಥನಾಗಿದ್ದ. ರಾತ್ರಿ ಘಟಿಸಿದ್ದು, ಅವನ ಪ್ರಜ್ಞಾವಸ್ಥೆಯಲ್ಲಿ ಸಂಭವಿಸಿರಲಿಲ್ಲ, ಆದರೂ ಅದನ್ನು ಹರಿಲಾಲ ಮರೆತಿರಲಿಲ್ಲ. ಅವನು ಗುಲಾಬಳೊಂದಿಗೆ ಮುಖ ಕೊಟ್ಟು ಮಾತನಾಡಲು ಭಯಪಡುತ್ತಿದ್ದ. ಮಕ್ಕಳು ನಿತ್ಯದಂತೆ ಅಪ್ಪನನ್ನು ಅಪ್ಪಿಕೊಳ್ಳಲು ಬಂದಾಗ ಹರಿಲಾಲ ತನ್ನನ್ನು ಅಪರಾಧಿ ಎಂದು ಭಾವಿಸಿ ತನ್ನ ದೇಹವನ್ನು ಮುದುಡಿಕೊಳ್ಳುತ್ತಿದ್ದ.

ಮಕ್ಕಳಿಗೆ ಕೇಳಿಸದಂತೆ ಹರಿಲಾಲ ಗುಲಾಬಳೆದುರು ತನ್ನ ಪಶ್ಚಾತ್ತಾಪವನ್ನು ವ್ಯಕ್ತಗೊಳಿಸಿದ. ಗುಲಾಬ ಮಾತ್ರ ಮಾತನಾಡಲಿಲ್ಲ. ರಾತ್ರಿಯಿಡೀ ರೋದಿಸಿದ್ದರಿಂದ ಹಾಗೂ ಎಚ್ಚರವಾಗಿದ್ದುದರಿಂದ ಅವಳ ಕಣ್ಣುಗಳು ಕೆಂಪಗಾಗಿದ್ದವು, ಅವಳು ಪತಿಯನ್ನು ಕರುಣೆಯಿಂದ ನೋಡುತ್ತಾ ಹೇಳಿದಳು, "ನಿಮ್ಮ ಅಪರಾಧವನ್ನು ಕ್ಷಮಿಸಲು ನಾನ್ಯಾರು? ನನ್ನಿಂದ ಬಹುಶಃ ಪಾಪಕಾರ್ಯವೊಂದು ನನಗೇ ತಿಳಿಯದಂತೆ ಸಂಭವಿಸಿರಬೇಕು, ಅದಕ್ಕೇ ನಿಮಗೆ ಈ ಪಾಪದ ಮಾರ್ಗ ಹೊಳೆದಿದೆ. ಆದರೆ ಬಾ ಮತ್ತು ಬಾಪೂ ಅವರಿಗೆ ಈ ವಿಷಯ ತಿಳಿದಾಗ, ಅವರ ಪರಿಸ್ಥಿತಿ ಏನಾಗುವುದೆಂದು ಯೋಚಿಸಿ ನನಗೆ ಗಾಬರಿಯಾಗುತ್ತಿದೆ.'

ಹರಿಲಾಲ ಮೌನವನ್ನು ತಾಳಿದ್ದ.

ವೇತನದ ನಿಯಮಿತ ಆದಾಯದಿಂದ ಮನೆಯ ಖರ್ಚುವೆಚ್ಚ ಸರಿದೂಗುತ್ತಿತ್ತು. ಈಗ ಹರಿಲಾಲ ತನ್ನ ಮಕ್ಕಳ ವಿದ್ಯಾಭ್ಯಾಸದ ಕಡೆಗೂ ಗಮನ ಕೊಡಲಾರಂಭಿಸಿದ್ದ. ಮಕ್ಕಳಿಗೆ ನಿತ್ಯ ಸ್ವಲ್ಪ ಸಮಯ ಪಾಠವನ್ನು ಹೇಳಿಕೊಡುತ್ತಿದ್ದ. ಹಾಗಂತ ಎಲ್ಲವೂ ಸುಸೂತ್ರವಾಗಿ ನಡೆದುಕೊಂಡು ಹೋಗುತ್ತಿತ್ತು. ಆದರೆ ಹರಿಲಾಲ ಯೋಚಿಸಿದಂತೆ, ಸೇಠ್ ನರೋತ್ತಮದಾಸರು ಈ ಮೊದಲು ಹೇಳಿದಂತೆ ವೇತನವನ್ನು ಹೆಚ್ಚು ಮಾಡಿರಲಿಲ್ಲ ಅಥವಾ ಪದೋನ್ನತಿಯನ್ನೂ ಕೊಟ್ಟಿರಲಿಲ್ಲ. ಅತ್ತ ಬಂಗಾಳಿ ಸ್ನೇಹಿತನೊಂದಿಗೆ ಮದ್ಯದ ನಶೆಯ ಸುಖವನ್ನು ಕಂಡಿದ್ದ ಹರಿಲಾಲ ಆ ಸುಖವನ್ನು ಅನುಭವಿಸಲು ಹಾತೊರೆಯುತ್ತಿದ್ದ. ಅವನಿಗೆ ತನ್ನ ಜೇಬಿನಿಂದ ಹಣವನ್ನು ಖರ್ಚು ಮಾಡಿ ಆ ಗೀಳನ್ನು ಪೂರೈಸಿಕೊಳ್ಳುವ ಸಾಮರ್ಥ್ಯ ಇರಲಿಲ್ಲ.

ಅಲ್ಲದೆ ಅವನು ವೈಭವದ ಜೀವನವನ್ನು ಸಾಗಿಸಬೇಕೆಂದು ಬಯಸಿದ್ದ, ಆದರೆ ಯಾವುದೂ ಈಡೇರಿರಲಿಲ್ಲ. ಹೀಗಾಗಿ ಅವನ ಮಾನಸಿಕ ಅಶಾಂತಿ ಹೆಚ್ಚುತ್ತಿತ್ತು. ನೌಕರಿ ಮಾಡಿ, ಯಾವುದೇ ವಿಧದಲ್ಲೂ ಹಣ ಗಳಿಸುವುದು ಸಾಧ್ಯವಿಲ್ಲ ಎಂಬುದು ಅವನಿಗೆ ಮನದಟ್ಟಾಗಿತ್ತು. ಈ ನಡುವೆ ಬಟ್ಟೆಯ ವ್ಯಾಪಾರದಲ್ಲಿ ಬೇಕಾದ ಚಾಕಚಕ್ಯತೆ ಮತ್ತು ಜ್ಞಾನವನ್ನು ತನ್ನ ಅನುಭವದಿಂದ ಪಡೆದಿದ್ದ.

ಈಗ ಹೇಗಾದರೂ ಮಾಡಿ ವ್ಯಾಪಾರವೊಂದನ್ನು ಮಾಡಿ ರಾತ್ರೋರಾತ್ರಿ ಹೆಚ್ಚು ಹಣವನ್ನು ಸಂಪಾದಿಸಬೇಕು ಎಂದು ಅವನು ತವಕಿಸುತ್ತಿದ್ದ. ಮೊದಲ ಮಹಾಯುದ್ಧ ಆರಂಭಗೊಂಡಿತ್ತು, ದೇಶದ ಜವಳಿ ಉದ್ಯಮ ಅನಪೇಕ್ಷಿತ ದಿಕ್ಕುಗಳಲ್ಲಿ ಬೆಳೆಯುತ್ತಿತ್ತು. ಯುದ್ಧದಿಂದಾಗಿ ಬಟ್ಟೆಯ ಕೊರತೆ ಕಾಡುತ್ತಿತ್ತು, ಬಟ್ಟೆ ಉದ್ಯಮದ ಮೇಲೆ ಸರ್ಕಾರ ನಿಯಂತ್ರಣ ಹೇರಿತ್ತು; ವಿತರಣೆಯ ವ್ಯವಸ್ಥೆಯಲ್ಲಿ ಭಾರಿ ಅಲ್ಲೋಲಕಲ್ಲೋಲ ಉಂಟಾಗಿತ್ತು. ಅದರಲ್ಲಿ ಗೋಲ್‌ಮಾಲ್ ಮಾಡುವ ಬುದ್ಧಿವಂತ ವ್ಯಾಪಾರಿಗಳು ರಾತ್ರೋರಾತ್ರಿ ಹಣವನ್ನು ಗಳಿಸುತ್ತಿದ್ದರು. ಇವನ್ನೆಲ್ಲಾ ಹರಿಲಾಲ ಸ್ವತಃ ತನ್ನ ಕಣ್ಣಾರೆ ನೋಡುತ್ತಿದ್ದ. ಹೇಗಾದರೂ ತನ್ನ ಕೈಗೆ ಸ್ವಲ್ಪವಾದರೂ ಹಣ ಬಂದರೆ...ಹರಿಲಾಲ ಜವಳಿ ಉದ್ಯಮದಲ್ಲಿ ಧುಮಕಲು ಹುಚ್ಚನಂತಾಗಿದ್ದ.

ಆದರೆ ವ್ಯಾಪಾರ ಮಾಡುವಷ್ಟು ಬೇಕಾದ ಹಣಕ್ಕೆ ಯಾವ ಉಪಾಯವೂ ಇರಲಿಲ್ಲ. ಹರಿಲಾಲನ ವ್ಯಾಕುಲತೆ ಹೆಚ್ಚುತ್ತಲೇ ಇತ್ತು. ಅದೆಷ್ಟೋ ಬಾರಿ, ಬಂಗಾಳಿ ಗೆಳೆಯನೊಂದಿಗೆ, ನೃತ್ಯಶಾಲೆಯಲ್ಲಿ 'ಎರಡುಗುಟುಕಿ' ನ ಸಮಾರಂಭ ನಡೆಯುತ್ತಿತ್ತು. ಅಂದು ರಾತ್ರಿ ಹರಿಲಾಲ ಅಪರಾಧಿಯಂತೆ, ಯಾರಿಗೂ ತನ್ನ ಮುಖವನ್ನು ತೋರಿಸದೆ, ನಡುರಾತ್ರಿಯಲ್ಲಿ ಮನೆಗೆ ನುಗ್ಗಿ ತನ್ನ ಹಾಸಿಗೆಯ ಮೇಲೆ ಕೈಕಾಲುಗಳನ್ನು ಮಡಚಿ ಮಲಗುತ್ತಿದ್ದ. ಗುಲಾಬ ಒಂದು ಶಬ್ದವನ್ನೂ ಹೇಳದೆ ದೇವರೆದುರು ಕೈ ಮುಗಿದು ಆಶೀರ್ವಾದವನ್ನು ಯಾಚಿಸುತ್ತಿದ್ದಳು. ಹರಿಲಾಲ ಬೆಳಿಗ್ಗೆ ಹೆಂಡತಿಯ ಎದುರು ನಾಚಿಕೆಯನ್ನು ತೋರಿದರೆ ಗುಲಾಬ ರೋದಿಸುತ್ತಾ ಹೇಳುತ್ತಿದ್ದಳು, 'ಬಾ ಮತ್ತು ಬಾಪೂ ಅವರಿಗೆ ಇವೆಲ್ಲಾ ತಿಳಿದರೆ ಅವರಿಗೆ ಎಷ್ಟು ದುಃಖವಾಗುವುದು...ನಾವೀಗ ಸುಖವಾಗಿ ಎರಡು ರೊಟ್ಟಿಯನ್ನು ತಿನ್ನುತ್ತಿದ್ದೇವೆ...ನಿಮಗೆ ಇನ್ನೇನು ಬೇಕು?'

'ಗುಲಾಬ!' ಹರಿಲಾಲ ಹೆಂಡತಿಯನ್ನು ನೋಡಿ ತನ್ನ ಕಳವಳವನ್ನು ಸ್ಪಷ್ಟಗೊಳಿಸಿದ, 'ಒಂದು ವೇಳೆ ನಮ್ಮ ಬಳಿ ಅಲ್ಪಸ್ವಲ್ಪ ಹಣವಿದ್ದಿದ್ದರೆ, ಯಾವ ಅಪಾಯವಿಲ್ಲದೆ ನಾವು ಶ್ರೀಮಂತರಾಗಬಹುದು. ಈ ವೇಳೆಯಲ್ಲಿ ಜವಳಿ ಉದ್ಯಮಕ್ಕೆ ಬೆಂಕಿ ಬಿದ್ದಂತಿದೆ. ನನಗೆ ಬಜಾರಿನ ಈ ಮುಖದ ಪರಿಚಯವಿದೆ. ಎಲ್ಲಿಂದಲಾದರೂ ಸ್ವಲ್ಪ ಸಹಾಯ ಸಿಕ್ಕಿದ್ದರೆ...'

'ಕೇಳಿ!' ಗುಲಾಬ ಸಹಾನುಭೂತಿಯಿಂದ ಮಾರ್ಗವೊಂದನ್ನು ಸೂಚಿಸಿದಳು, 'ರಾಜಕೋಟದಲ್ಲಿ ನನ್ನ ತಾಯಿ ತಮ್ಮ ಭವಿಷ್ಯಕ್ಕಾಗಿ ಸ್ವಲ್ಪ ಹಣವನ್ನು ಉಳಿತಾಯ ಮಾಡಿದ್ದಾರೆ. ಅದು ಸುಮಾರು ಮೂರು ಸಾವಿರವಾಗಬಹುದು. ಅವರ ಜೀವನ ಆ ಹಣದ ಬಡ್ಡಿಯಿಂದಲೇ ನಡೆಯುತ್ತದೆ. ಅವರು ಆ ಹಣವನ್ನು ಯಾರ ಬಳಿ ಬಡ್ಡಿಗಾಗಿ ಇಟ್ಟಿದ್ದಾರೋ, ಅವರಿಂದ ಆ ಹಣವನ್ನು ಮರಳಿ ಪಡೆದು ನಿಮಗೆ ಕೊಡುತ್ತಾರೆ...'

'ಹಾಗಾದರೆ, ನಮ್ಮ ಕಷ್ಟ ಪರಿಹಾರ ವಾಯಿತೆಂದೇ ತಿಳಿ!' ಹರಿಲಾಲ ಉತ್ಸಾಹದಲ್ಲಿ ಹೇಳಿದ, 'ಈಗ ಅವರಿಗೆ ಬಡ್ಡಿ ರೂಪದಲ್ಲಿ ಎಷ್ಟು ದುಡ್ಡು ಸಿಗುವುದೋ, ಅದನ್ನೇ ನಾವೂ ಸಹ ಕೊಡುತ್ತಿರೋಣ. ನನ್ನ ನೌಕರಿಯಂತೂ ಇದ್ದೇ ಇದೆ. ಹೀಗಾಗಿ ಹಣ ಸಂದಾಯ ಮಾಡದ ಪ್ರಶ್ನೆಯೇ ಇರುವುದಿಲ್ಲ. ನಾವು ಇವತ್ತೇ ರಾಜಕೋಟಕ್ಕೆ ಪತ್ರ ಬರೆಯೋಣ.'

ಅಂದೇ ಗುಲಾಬ ಮತ್ತು ಹರಿಲಾಲ ರಾಜಕೋಟಕ್ಕೆ ಪತ್ರವನ್ನು ಬರೆದು 'ಆ ಹಣದಿಂದ ನಮ್ಮ ಬಡತನ ಸುಲಭವಾಗಿ ದೂರವಾಗುವುದು' ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಅಲ್ಲದೆ ಹಣಕ್ಕೆ ಬಡ್ಡಿ ಕೊಟ್ಟು, ಮೂಲ ಹಣದ ಸುರಕ್ಷತೆಯ ಬಗ್ಗೆ ಆಶ್ವಾಸನೆಯನ್ನು ಸಹ ಕೊಟ್ಟರು, ಸಮಯಕ್ಕೆ ಸರಿಯಾಗಿ ಬಡ್ಡಿ ಹಣವನ್ನು ಕೊಡುವುದಾಗಿ ಮಾತು ಕೊಟ್ಟರು.

'ನೋಡಿ!' ಪತ್ರವನ್ನು ಬರೆದ ನಂತರ ಗುಲಾಬ ಪತಿಗೆ ಹೇಳಿದಳು, 'ರಾತ್ರೋರಾತ್ರಿ ಹಣ ಸಂಪಾದನೆ ಮಾಡುವ ದುರಾಸೆಯಲ್ಲಿ ಈ ಬಂಡವಾಳವೂ ಕೈತಪ್ಪಿ ಹೋಗಬಾರದು. ನನಗಂತೂ ಏನೂ ತಿಳಿಯುವುದಿಲ್ಲ, ಆದರೆ ನಾವು ತಲೆ ತಗ್ಗಿಸುವಂತೆ ಆಗಬಾರದು, ಅಂಥ ಯಾವ ಕೆಲಸವನ್ನು ಸಹ ನೀವು ಮಾಡಬಾರದು.'

'ಗುಲಾಬ, ನೀನು ಚಿಂತಿಸಬೇಡ! ನೀನು ಸ್ವಲ್ಪ ದಿನ ನೋಡು, ನಾನು ನಿನ್ನ ಮೈತುಂಬಾ ಬಂಗಾರವನ್ನು ಹಾಕುತ್ತೇನೆ.' ಹರಿಲಾಲ ತನ್ನ ಯೋಚನೆಯಲ್ಲಿ ಅಪಾರ ಸಂಪತ್ತನ್ನು ಕಂಡ.

(ಸಶೇಷ)